ಆಚೆ ಆ ಊರು. ಈಚೆ ಈ ಊರು. ಮಧ್ಯದಲ್ಲಿ ಹರಿಯುವ ನದಿ ತಪಸ್ವಿನಿ. ಮೊದಲು ಆ ಊರಿನಿಂದ ಈ ಊರಿಗೆ ಮಳೆಗಾಲದಲ್ಲಿ ಸಂಪರ್ಕಕ್ಕೆ ಇದ್ದುದೊಂದು ದೋಣಿ. ಆಗ ಎರಡೂ ಊರುಗಳ ಮಧ್ಯೆ ವೈಷಮ್ಯವಿತ್ತು. ಈಗ ಎರಡೂ ಊರುಗಳನ್ನು ಸೇತುವೆಯೊಂದು ಬೆಸೆದಿದೆ. ಜನರಿಗೆ ಹಳೆಯ ವೈರ ಮರೆತುಹೋಗಿದೆ. ಮಧ್ಯೆ ತಪಸ್ವಿನಿ ಕುಲುಕುಲು ನಗುತ್ತಾ ಪ್ರವಹಿಸುತ್ತಿದ್ದಾಳೆ.

ಬಿಳಿ ಕಾರಿನಲ್ಲಿ ಬಂದಿಳಿದ ಆ ವ್ಯಕ್ತಿ ಆಚೆ ದಡದಲ್ಲಿಳಿದು ಸೇತುವೆಯನ್ನು ಪರೀಕ್ಷಕ ದೃಷ್ಟಿಯಿಂದ ನೋಡುತ್ತಿದ್ದ. ಅವನನ್ನು ಈಚೆ ದಡದಿಂದ ನೋಡುತ್ತಿದ್ದ ಈ ವ್ಯಕ್ತಿ ಕುತೂಹಲದಿಂದ ಸಮೀಪಿಸಿದ.

"ನೋಡಿದರೆ ಹೊಸಬರಂತೆ ಕಾಣುತ್ತಿದ್ದೀರಿ. ಸೇತುವೆ ನೋಡಲೆಂದೇ ಬಂದವರೇ?"

ಆ ವ್ಯಕ್ತಿ ಉತ್ತರಿಸಿದ, "ಹೌದು. ಈ ಸೇತುವೆಯ ಬಗ್ಗೆ ಪತ್ರಿಕೆಗಳಲ್ಲಿ ಏನೆಲ್ಲಾ ಓದಿ ಕುತೂಹಲ ಕೆರಳಿತ್ತು. ಈಗ ನೋಡಲು ಬಿಡುವು ಸಿಕ್ಕಿತು."

ಹಾಗೆಂದು ಹೇಳಿದ ಆ ವ್ಯಕ್ತಿಗೆ ಅರವತ್ತು ದಾಟಿರಬಹುದು. ಬಕ್ಕ ತಲೆ. ಕಣ್ಣಿಗೆ ದಪ್ಪನೆಯ ಕನ್ನಡಕ. ನಾಲ್ಕಿಂಚು ಮುಂದಕ್ಕೆ ಬಂದ ಹೊಟ್ಟೆ. ಈ ವ್ಯಕ್ತಿ ಇನ್ನೂ ತರುಣ. ಹೆಚ್ಚೆಂದರೆ ಇಪ್ಪತ್ತೆಂಟು. ತಲೆಯಲ್ಲಿ ಭರ್ತಿ ಕೂದಲಿತ್ತು. ನೋಡಲು ಒಳ್ಳೆ ಅಥ್ಲೆಟ್‌ನಂತಿದ್ದ.

"ಹೌದು ಸರ್. ಎರಡೂ ಊರುಗಳು ಅವುಗಳ ಪಾಡಿಗೆ ನೆಮ್ಮದಿಯಿಂದಲೇ ಬದುಕುತ್ತಿದ್ದವು. ಕ್ಷೇತ್ರದ ಎಂ.ಎಲ್.ಎ ಎರಡೂರುಗಳ ಮಧ್ಯೆ ಸೇತುವೆ ನಿರ್ಮಿಸಲಿಕ್ಕೆ ಹೊರಟ. ವಾಹನ ದಾಟುವ ಸ್ಥಳದಲ್ಲೇ ಸೇತುವೆಯಾಗಬೇಕೆಂದು ಆ ಊರು ಹೇಳಿತು. ದೋಣಿ ದಾಟುವ ಸ್ಥಳದಲ್ಲಿ ಸೇತುವೆ ನಿರ್ಮಾಣವಾಗಬೇಕೆಂದು ಈ ಊರು ಹೇಳಿತು. ಎಂ.ಎಲ್.ಎ ವಾಹನ ದಾಟುವ ಸ್ಥಳದಲ್ಲೇ ಸೇತುವೆ ನಿರ್ಮಾಣವಾಗಲಿ ಎಂದ. ಕಂಟ್ರಾಕ್ಟರ್ ಮೊಹಿಯುದ್ದೀನ್ ಅಲ್ಲಿ ದಡ ಕೊರೆತ ಇದೆ. ಆದುದರಿಂದ ದೋಣಿ ದಾಟುವಲ್ಲೇ ಸೇತುವೆ ಆಗುವುದು ಸೂಕ್ತ ಎಂದ. ಮೊದಲೇ ಎಂ.ಎಲ್.ಎ.ಗೆ ತನ್ನ ಕಡೆಯವನಿಗೆ ಕಂಟ್ರಾಕ್ಟು ಸಿಗಲಿಲ್ಲವೆಂದು ಸಿಟ್ಟಿತ್ತು. ಅವನು ಆ ಊರವರನ್ನು ಈ ಊರಿನವರ ಮೇಲೆ ಎತ್ತಿ ಕಟ್ಟಿದ. ಅದಕ್ಕೆ ತಕ್ಕಂತೆ ಒಂದು ಘಟನೆ ನಡೆಯಿತು. ಅದರಿಂದ ಶಾಂತಿ ಕದಡಿ ಹೋಯ್ತು."

"ಎಲ್ಲವನ್ನೂ ನೋಡಿದಂತೆ ವಿವರಿಸುತ್ತಿದ್ದೀರಲ್ಲಾ? ಆಗ ನೀವು ಹುಟ್ಟಿದ್ರಾ?"

"ಎಲ್ಲಿ ಬಂತು ಸರ್? ನನಗೆ ನನ್ನ ಅಪ್ಪ ಹೇಳಿದ್ದು. ನಾನು ಈ ಊರಿಗೆ ಸೇರಿದವನು. ನಾನು ಹುಟ್ಟಿದ್ದೇ 28 ವರ್ಷಗಳ ಹಿಂದೆ. ಈ ಸೇತುವೆ ಆಗಿ 30 ವರ್ಷ ಕಳೆದು ಹೋಗಿರಬೇಕು."

"ಸರಿ. ಎರಡೂ ಊರ ಶಾಂತಿ ಕದಡಿಹೋಗುವ ಘಟನೆ ನಡೆಯಿತೆಂದು ಹೇಳಿದಿರಲ್ಲಾ? ಏನದು ಆ ಘಟನೆ?"

"ಸೇತುವೆ ನಿರ್ಮಾಣಕ್ಕೆ ಮುನ್ನ ಒಂದು ರಾತ್ರಿ ಚಂದ್ರಗಿರಿಯ ದೊಡ್ಡ ಸ್ವಾಮೀಜಿ ಆ ಊರಿನಿಂದ ಈ ಊರಿಗಾಗಿ ಬೆಂಗಳೂರಿಗೆ ಹೋದರು. ಅವರು ಈ ಊರಿಗೆ ಬಂದಾಗ ಮಧ್ಯರಾತ್ರಿ. ಮೂತ್ರಶಂಕೆಗೆಂದು ಅವರು ಈ ಊರಿನ ಒಂದು ನಿರ್ಜನ ಪ್ರದೇಶದಲ್ಲಿ ಇಳಿದರು. ಅವರು ಮೂತ್ರಶಂಕೆ ನಿವಾರಿಸುವಾಗ ಪಕ್ಕದ ಮನೆಯೊಂದರಿಂದ ಕಲ್ಲುಗಳು ತೂರಿ ಬಂದವು. ಸ್ವಾಮೀಜಿ ಅವಸರವಸರದಲ್ಲಿ ಮೂತ್ರಶಂಕೆ ಮುಗಿಸಿ ಕಾರು ಹತ್ತಿ ವೇಗವಾಗಿ ಈ ಊರಿನಿಂದ ಪಾರಾಗಿ ಹೋದರು. ಸ್ವಾಮೀಜಿಗೆ ಅಪಮಾನ ಮಾಡಿದರೆಂದು ಆ ಊರಿನವರು ಈ ಊರವರ ಮೇಲೆ ಮುಗಿಬಿದ್ದರು. ದೊಡ್ಡ ಗಲಾಟೆಯೇ ನಡೆದುಹೋಯಿತು. ಸಂಜೆ ಆಗುವಾಗ ದೊಂದಿ ಹಿಡಿದ ಜನಗಳು ಅಲ್ಲಿಂದ ಇಲ್ಲಿಗೆ ಬಂದರು. ಇಲ್ಲಿಂದ ಅಲ್ಲಿಗೆ ಹೋದರು. ಅಂಗಡಿಗಳನ್ನು ದೋಚಿದರು. ಮನೆಗಳನ್ನು ಸುಟ್ಟರು. ಅಳ್ಳೆದೆಯವರು ದಿಕ್ಕಾಪಾಲಾಗಿ ಓಡಿ ಹೋದರು."

"ಸ್ವಾಮೀಜಿ ಮೇಲೆ ಕಲ್ಲು ಬಿಸಾಡಿದವರು ಯಾರೆಂದು ಗೊತ್ತಾಯಿತೇ?"

"ಸ್ವಾಮೀಜಿ ಮೂತ್ರ ಶಂಕೆಗೆಂದು ಇಳಿದಲ್ಲಿ ದಿಲ್‌ಶಾದ್ ಬೇಗಂಳ ಮನೆಯಿದೆ. ಅವಳ ಗಂಡ